ಕರ್ನಾಟಕ ಸೆಂಟ್ರಲ್ ಕೋ-ಆಪ್‌ರೇಟಿವ್ ಬ್ಯಾಂಕ ಲಿ., ಧಾರವಾಡ.

ಕೇಂದ್ರ ಕಛೇರಿ : ಪೋಸ್ಟ್ ಬಾಕ್ಸ್ ನಂ. ೨೧, ಸುಭಾಸರಸ್ತೆ, ಧಾರವಾಡ.

THE KARNATAK CENTRAL CO-OPERATIVE BANK LTD., DHARWAD.

HEAD OFFICE : P.B NO 21, SUBHAS ROAD DHARWAD.

ಕ್ರ: 1607 :ಆಡಳಿತ:ಎವಗ:2026

ದಿನಾಂಕ: 05.02.2026

## -:ಪ್ರಕಟಣೆ:-

ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳ ವ್ಯಾಪ್ತಿಯಲ್ಲಿರುವ ನಮ್ಮ ಬ್ಯಾಂಕಿನ ಶಾಖೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸೇವೆ ಒದಗಿಸಲು ಭದ್ರತೆ ಎಜೆನ್ಸಿಗಳಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ಫಾರ್ಮ್ ಮತ್ತು ವಿವರಗಳ ಮಾಹಿತಿಯನ್ನು ಬ್ಯಾಂಕಿನ ಕೇಂದ್ರ ಕಚೇರಿ ಶಾಖೆ ಧಾರವಾಡದಲ್ಲಿ ನಿಗಧಿತ ಮೊತ್ತ ಪಾವತಿಸಿ ಪಡೆಯಬಹುದಾಗಿದೆ. ದರಪಟ್ಟಿ ಸಲ್ಲಿಕೆಗೆ ಕೊನೆಯ ದಿ:16.02.2026. ಬ್ಯಾಂಕಿನ ವೆಬ್ ಸೈಟ್ **https://kccbdharwad.bank.in/** ನಲ್ಲಿ ವಿವರಗಳನ್ನು ಪ್ರಕಟಿಸಲಾಗಿದೆ.

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
ಕೆಸಿಸಿ ಬ್ಯಾಂಕ ಲಿ., ಧಾರವಾಡ.

Scanned with OKEN Scanner

## ಕರ್ನಾಟಕ ಸೆಂಟ್ರಲ್ ಕೋ-ಆಪ್‌ರೇಟಿವ್ ಬ್ಯಾಂಕ ಲಿ., ಧಾರವಾಡ.

ಕ್ರ:1607 :ಆಡಳಿತ:ಎವಇ:2025-26 ದಿನಾಂಕ:05.02.2026

ಗೆ,

------------------------

------------------------

------------------------

**ವಿಷಯ: ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸಿಬ್ಬಂದಿ ಸೇವೆಗೆ ದರಪಟ್ಟಿ ಪೂರೈಸಲು (QUOTATION) ಸಲ್ಲಿಸುವ ಕುರಿತು.**

**ಕರಾರುಗಳು:**

1. ಗುತ್ತಿಗೆದಾರರು ಪೊಲೀಸ್ ಇಲಾಖೆಯಿಂದ ಅಧಿಕೃತ ಲೈಸನ್ಸ್ ಹೊಂದಿರಬೇಕು.
2. ಕಾರ್ಮಿಕ ಇಲಾಖೆಯಿಂದ ಮಾನ್ಯತೆ ಪಡೆದಿರಬೇಕು.
3. ದೃಢಕಾಯ/ ಆರೋಗ್ಯವಂತ 18 ವರ್ಷಕ್ಕಿಂತ ಮೇಲ್ಪಟ್ಟ ಹಾಗೂ 45 ವರ್ಷದೊಳಗಿನ ವಯೋಮಿತಿಯೊಳಗಿರುವ ಕನ್ನಡ ಓದಲು ಹಾಗೂ ಬರೆಯಲು ತಿಳಿದಿರುವ ಭದ್ರತಾ ಸಿಬ್ಬಂದಿಯನ್ನು ಮಾತ್ರ ಒದಗಿಸಬೇಕು.
4. ಟೆಂಡರ ಫಾರ್ಮನ್ನು ಬ್ಯಾಂಕಿನಲ್ಲಿ **ರೂ.2000(ಜಿ.ಎಸ್.ಟಿ) ಒಟ್ಟು ರೂ.360/-** ಪಾವತಿಸಿ ಪಡೆದುಕೊಳ್ಳಬಹುದಾಗಿದೆ.ಹಾಗೂ ಟೆಂಡರ ಸಲ್ಲಿಸುವ ಕೊನೆಯ **ದಿ:16.02.2026 ಸಂಜೆ 4:00 ಗಂಟೆ ರೂ.25,000.00** ಇ.ಎಮ್.ಡಿ (ಭದ್ರತಾ ಠೇವಣಿ)ಯನ್ನು ಬ್ಯಾಂಕಿನಲ್ಲಿ ನಗದು ಪಾವತಿಸಿತಕ್ಕದ್ದು.
5. ಭದ್ರತಾ ಸಿಬ್ಬಂದಿಯನ್ನು 4 ವರ್ಷದ ಅವಧಿಗೆ ಮಾತ್ರ ನೇಮಿಸಿಕೊಳ್ಳಲಾಗುವುದು. ಸೇವೆ ತೃಪ್ತಿಕರವಲ್ಲವೆಂದು ಕಂಡು ಬಂದಲ್ಲಿ ಸೇವೆಯಿಂದ ಹಿಂಪಡೆಯುವ ಹಕ್ಕನ್ನು ಬ್ಯಾಂಕು ಕಾಯ್ದಿರಿಸಿಕೊಂಡಿರುತ್ತದೆ.
6. ಪೋಲಿಸ ಇಲಾಖೆಯಲ್ಲಿ ದಾಖಲಾಗಿರುವ ಅಫರಾದಿಗಳನ್ನು ಮತ್ತು ಕ್ರಿಮಿನಲ್ ಕೇಸ್ ದಾಖಲಾದವರನ್ನು ನಿಯೋಜಿಸತಕ್ಕದ್ದಲ್ಲ.
7. ಬ್ಯಾಂಕಿನ ಚರ-ಸ್ಥಿರ ಆಸ್ಥಿಯನ್ನು ಸಂರಕ್ಷಿಸಲು ಬದ್ಧರಾಗಿರತಕ್ಕದ್ದು. ಬ್ಯಾಂಕಿನ ಆಸ್ತಿಗೆ ಧಕ್ಕೆ ಉಂಟಾದಲ್ಲಿ ಅದರ ನಷ್ಟವನ್ನು ಭದ್ರತಾ ಗುತ್ತಿಗೆದಾರರೇ ಭರಿಸತಕ್ಕದ್ದು
8. ಭದ್ರತಾ ಸಂಸ್ಥೆಯು ಕಾರ್ಮಿಕ ಇಲಾಖೆ, ಸೇವಾ ತೆರಿಗೆ, ವೃತ್ತಿ ತೆರಿಗೆ, ಪಿ.ಎಫ್ ಹಾಗೂ ಇ.ಎಸ್.ಐ ಇಲಾಖೆಯಲ್ಲಿ ನೊಂದಾಯಿಸಿಕೊಂಡಿರತಕ್ಕದ್ದು. ಸದರಿ ಪಿ.ಎಫ್ , ಇ.ಎಸ್.ಐ ಮೊತ್ತವನ್ನು ಭದ್ರತಾ ಏಜೆನ್ಸಿಯವರು ನೇಮಿಸಲಾದ ನೌಕರರ ಹೆಸರಿನಲ್ಲಿ ಸಂಬಂಧಪಟ್ಟ ಇಲಾಖೆಗೆ ಭರಣಾ ಮಾಡುವ ಜವಾಬ್ದಾರಿ ಭದ್ರತಾ ಗುತ್ತಿಗೆದಾರದಾಗಿರುತ್ತದೆ.

Scanned with OKEN Scanner

9. ಭದ್ರತಾ ಎಜೆನ್ಸಿ ಒದಗಿಸುವ ಎಲ್ಲಾ ಭದ್ರತಾ ಸಿಬ್ಬಂದಿಗಳಿಗೂ ಟಾರ್ಚ್, ಶೂಗಳು, ದಂಡು, ವಿಜಿಲ್, ಭದ್ರತಾ ಎಜೆನ್ಸಿ ಒದಗಿಸುವ ಎಲ್ಲಾ ಭದ್ರತಾ ಸಿಬ್ಬಂದಿಗಳಿಗೂ ಇನ್ನಿತರೆ ಅಗತ್ಯ ಸಲಕರಣೆಗಳನ್ನು ಸರಬರಾಜು ಮಾಡುವುದು ಹಾಗೂ ಪ್ರತಿ ಏಜೆನ್ಸಿ ಗುರುತಿನ ಬ್ಯಾಡ್ಜ್ ಇನ್ನಿತರೆ ಅಗತ್ಯ ಸಲಕರಣೆಗಳನ್ನು ಸರಬರಾಜು ಮಾಡುವುದು ಹಾಗೂ ಪ್ರತಿ ಭದ್ರತಾ ಸಿಬ್ಬಂದಿಯು ತನ್ನ ಭದ್ರತಾ ಸೇವಾ ಅವಧಿಯಲ್ಲಿ ಸಮವಸ್ತ್ರ ಧರಿಸಿರತಕ್ಕದ್ದು. ಬ್ಯಾಂಕು ಯಾವುದೇ ಸಾಮಗ್ರಿಗಳನ್ನು ಒದಗಿಸುವುದಿಲ್ಲ.

10. ನಿಯೋಜಿತ ಭದ್ರತಾ ಸಿಬ್ಬಂದಿ ಸೇವೆಯಿಂದ ಗೈರು ಹಾಜರಾದಲ್ಲಿ ತಕ್ಷಣವೇ ಬದಲಿ ವ್ಯವಸ್ಥೆಮಾಡಿ ಸಿಬ್ಬಂದಿಯನ್ನು ನಿಯೋಜಿಸುವ ಜವಾಬ್ದಾರಿಯು ಗುತ್ತಿಗೆದಾರದಾಗಿರುತ್ತದೆ.

11. ಭದ್ರತಾ ಸೇವೆಯಲ್ಲಿ ಕಾರ್ಯನಿರತ ಭದ್ರತಾ ಸಿಬ್ಬಂದಿಗಳಿಗೆ ಯಾವುದೇ ಗಲಭೆ ಘರ್ಷಣೆ ಹಾಗೂ ಏಟಿನಿಂದ ಗಾಯಗಳಾಗಿದ್ದಲ್ಲಿ ಅಥವಾ ಅನಾಹುತವಾದಲ್ಲಿ ಏಜೆನ್ಸಿಯು ಈ ಸಂಬಂಧ ಪೂರ್ಣ ಜವಾಬ್ದಾರಿಯನ್ನು ಹೊತ್ತು ಪೋಲೀಸ್ ಇಲಾಖೆಗೆ ದೂರು ಸಲ್ಲಿಸತಕ್ಕದ್ದು. ಈ ಸಂಬಂಧದಲ್ಲಿ ತಗಲುವ ಎಲ್ಲಾ ವೆಚ್ಚಗಳನ್ನು ಭದ್ರತಾ ಏಜೆನ್ಸಿಯು ಭರಿಸತಕ್ಕದ್ದು.

12. ಗುತ್ತಿಗೆ ಅವಧಿಯಲ್ಲಿ ಒಂದು ವೇಳೆ ಯಾವುದೇ ಸಮಯದಲ್ಲಿ ಭದ್ರತಾ ಏಜೆನ್ಸಿಯು ಒದಗಿಸುವ ಭದ್ರತಾ ಸೇವೆಯು ಸಮರ್ಪಕ ಹಾಗೂ ತೃಪ್ತಿಕರವಾಗಿಲ್ಲವೆಂದು ಕಂಡುಬಂದಲ್ಲಿ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಸೇವಾ ಗುತ್ತಿಗೆಯನ್ನು ಮತ್ತು ಗುತ್ತಿಗೆ ಅವಧಿಯನ್ನು ರದ್ದುಪಡಿಸುವ ಅಧಿಕಾರವನ್ನು ಬ್ಯಾಂಕು ಹೊಂದಿರುತ್ತದೆ.

13. ಗುತ್ತಿಗೆದಾರರು ತಾವು ಪಡೆದ ಗುತ್ತಿಗೆಯನ್ನು ಬೇರೆಯವರಿಗೆ ಪರಭಾರೆ ಮಾಡತಕ್ಕದ್ದಲ್ಲ.

14. ಕೆಲಸದ ಒತ್ತಡವಿರುವ ದಿನಗಳಲ್ಲಿ ಕಚೇರಿಯ ಅವಧಿಯ ನಂತರವೂ ಸಂದರ್ಭಾನುಸಾರ ಕಾರ್ಯನಿರ್ವಹಿಸಬೇಕು.

15. ಶಾಖೆಗಳಲ್ಲಿ ಹಣ ವರ್ಗಾವಣೆ ಕಾರ್ಯನಿರ್ವಹಣೆಯಲ್ಲಿ ಕೂಡಾ ಸದರಿ ನಿಯೋಜಿತ ಸಿಬ್ಬಂದಿಗಳು ಭದ್ರತಾ ಸೇವೆ ಒದಗಿಸುವುದು.

16. ಟೆಂಡರ್ ಪ್ರಕ್ರಿಯೆಯಲ್ಲಿ ತೀರ್ಮಾನಿಸಿದಂತೆ ಪ್ರತಿ ಸಿಬ್ಬಂದಿಗಳಿಗೆ ಟೆಂಡರ್ ನಲ್ಲಿ ನಿಗದಿಯಾದಂತೆ ವೇತನವನ್ನು ನಿಮ್ಮ ಸಂಸ್ಥೆಯಿಂದ ಪಾವತಿಸಿ ನಂತರ ಹಾಜರಾತಿ ಮತ್ತು ಇತರೆ ವಿವರಗಳೊಂದಿಗೆ ಬಿಲ್ಲನ್ನು ಬ್ಯಾಂಕಿಗೆ ಸಲ್ಲಿಸಬೇಕು ಟೆಂಡರ್ ಪ್ರಕ್ರಿಯೆಯಲ್ಲಿ ತೀರ್ಮಾನಿಸಿದಂತೆ ಪ್ರತಿ ಸಿಬ್ಬಂದಿಗಳಿಗೆ ಟೆಂಡರ್‌ನಲ್ಲಿ ನಿಗದಿಯಾದಂತೆ ವೇತನವನ್ನು ನಿಮ್ಮ ಸಂಸ್ಥೆಯಿಂದ ಪಾವತಿಸಿ ನಂತರ ಹಾಜರಾತಿ ಮತ್ತು ಇತರೆ ವಿವರಗಳೊಂದಿಗೆ ಬಿಲ್ಲನ್ನು ಬ್ಯಾಂಕಿಗೆ ಸಲ್ಲಿಸಬೇಕು

17. ಭದ್ರತಾ ಸಿಬ್ಬಂದಿಗಳ ಹಾಜರಾತಿಯೊಂದಿಗೆ ಪ್ರತಿ ಮಾಹೆಯ ಬಿಲ್ಲನ್ನು ಆಯಾ ತಿಂಗಳ ಮುಕ್ತಾಯದ ನಂತರ ಸಂಬಂಧಿಸಿದ ಶಾಖಾ ವ್ಯವಸ್ಥಾಪಕರುಗಳಿಗೆ ಸಲ್ಲಿಸತಕ್ಕದ್ದು

18. ನಿಯೋಜಿತ ಸಿಬ್ಬಂದಿಯು ಆಯಾ ಶಾಖೆಯ ಸ್ಥಳದಲ್ಲಿಯೇ ಕೆಲಸದ ಮೇಲೆ ಇರುವುದು ಹಾಗೂ ಶಾಖೆಯ ಆವರಣದಲ್ಲಿ ಉತ್ತಮ ರೀತಿಯಲ್ಲಿ ನಡೆದುಕೊಳ್ಳುವುದು.

19. ಭದ್ರತಾ ಸಿಬ್ಬಂದಿಗಳನ್ನು ನಿಯೋಜಿಸಿದ ಶಾಖೆಗಳಲ್ಲಿ ಕಳ್ಳತನ ಅಥವಾ ದರೋಡೆಗಳು ಆಗದಂತೆ ಕಾಯತಕ್ಕದ್ದು ಹಾಗೂ ಶಾಖೆಗಳಲ್ಲಿ ಕಳವು / ದರೋಡೆ ಅಥವಾ ಇನ್ನಾವುದೇ ತರಹದ ಅಹಿತಕರ ಘಟನೆ ನಡೆದು ಬ್ಯಾಂಕಿಗೆ ನಷ್ಟ ಉಂಟಾದಲ್ಲಿ ಭದ್ರತಾ ಸಂಸ್ಥೆಯೇ ಜವಬ್ದಾರಿಯಾಗಿರುತ್ತದೆ.

Scanned with OKEN Scanner

20. ಭದ್ರತಾ ಸಿಬ್ಬಂದಿಗಳು ಒಂದೇ ದಿನದಲ್ಲಿ ಒಂದಕ್ಕಿಂತ ಹೆಚ್ಚಿನ ಪಾಳಿಯಲ್ಲಿ ಕೆಲಸ ನಿರ್ವಹಿಸದಂತೆ ನೋಡಿಕೊಳ್ಳತಕ್ಕದ್ದು.

21. ಗುತ್ತಿಗೆದಾರರು ತಮ್ಮ ಭದ್ರತಾ ಸಿಬಂದಿಗಳಿಗೆ ಕನಿಷ್ಟ ವೇತನ ದರಗಳಿಂತ ಕಡಿಮೆ ಇಲ್ಲದಂತೆ ವೇತನವನ್ನು ನೀಡತಕ್ಕದ್ದು ಹಾಗೂ ಕಾಲ-ಕಾಲಕ್ಕೆ ಸರ್ಕಾರವು ನಿಗದಿ ಪಡಿಸಿದ ದರದಲ್ಲಿ ಇ.ಪಿ.ಎಫ್/ಇ.ಎಸ್.ಐ ಮತ್ತು ಇತರೇ ಶಾಸನ ಬದ್ಧವಾದ ಸೌಲಭ್ಯಗಳನ್ನು ನೀಡುವುದು ಗುತ್ತಿಗೆದಾರರ ಹೋಣೆಗಾರಿಕೆಯಾಗಿರುತ್ತದೆ. ಹಾಗೂ ಸೇವಾ ತೆರಿಗೆ ವ ಇತರೆ ತೆರಿಗೆಗಳನ್ನು ಸರ್ಕಾರಕ್ಕೆ ಭರಿಸುವುದು ಗುತ್ತಿಗೆದಾರರು ಭದ್ಧರಾಗಿರತಕ್ಕದ್ದು.

22. ಇನ್ನುಳಿದ ಯಾವತ್ತು ಕಾರ್ಮಿಕ ವ ಇತರ ಕಾಯ್ದೆಗಳಿಗೆ ಗುತ್ತಿಗೆದಾರರು ಬದ್ಧರಾಗಿರತಕ್ಕದ್ದು.

23. ಬ್ಯಾಂಕಿನಿಂದ ನಿಗದಿಪಡಿಸಿದ ಷರತ್ತುಗಳಿಗೆ ಹಾಗೂ ಬ್ಯಾಂಕು ಕಾಲಕಾಲಕ್ಕೆ ವಿಧಿಸಬಹುದಾದ ಇನ್ನಿತರ ಕರಾರುಗಳಿಗೆ ಒಪ್ಪಿಗೆ ಇದ್ದಬಗ್ಗೆ ರೂ.500.00ಸ್ಟಾಂಪ ಪೇಪರ ಮೇಲೆ ಕರಾರು ವಷರತ್ತುಗಳಿಗೆ ಒಪ್ಪಿಗೆ ಪತ್ರ ನೀಡತಕ್ಕದ್ದು.

**24. ಭದ್ರತಾ ಸೇವೆ ಒದಗಿಸಬೇಕಾದ ಶಾಖೆಗಳು –**

**1) 24 ಗಂಟೆ ಭದ್ರತೆ ಸೇವೆ**

1) ಕೇಂದ್ರ ಕಚೇರಿ ಧಾರವಾಡ 2) ಹುಬ್ಬಳ್ಳಿ

**2) 12 ಗಂಟೆ ಭದ್ರತೆ ಸೇವೆ (ಸಂಜೆ 06 ರಿಂದ ಬೆಳಿಗ್ಗೆ 06 ಗಂಟೆ)**

1) ಎಮ್.ನಗರ 2) ಮಾಳಮಡ್ಡಿ 3) ಗದಗ 4)ಹಾವೇರಿ 5) ರಾಣೇಬೆನ್ನೂರ 6) ಹೊಳೇ-ಆಲೂರು 7) ಹಿರೇಕೆರೂರು 8) ಅಕ್ಕಿ-ಆಲೂರ 9)ಕಲಘಟಗಿ 10)ಹಲಗೇರಿ 11)ಶಿಗ್ಗಾಂವ 12) ನವಲಗುಂದ 13) ರೋಣ 14) ಬ್ಯಾಡಗಿ 15)ಕುಂದಗೋಳ 16) ಲಕ್ಷ್ಮೇಶ್ವರ 17)ಹೊಸರಿತ್ತಿ 18) ಮಾಸೂರ 19) ಅಳಗವಾಡಿ

25. ಅವಶ್ಯಕತೆ ಇದ್ದಲ್ಲಿ ಒಪ್ಪಿತವಾಗುವ ದರಗಳ ಪ್ರಕಾರ ಭ್ಯಾಂಕಿನ ಇನ್ನಿತರೇ ಶಾಖೆಗಳಿಗೆ ಕೂಡಾ ಭದ್ರತಾ ಸೇವೆ ಒದಗಿಸುವುದು.

26. ಭದ್ರತಾ ಏಜೆನ್ಸಿಯವರು ದರಪಟ್ಟಿಯೊಂದಿಗೆ ತಮ್ಮ ಸಂಸ್ಥೆಯ ನೋಂದಣಿ ಪ್ರಮಾಣ ಪತ್ರ ಜಿ.ಎಸ್.ಟಿ./ ಪ್ಯಾನ್ ಕಾರ್ಡ್ ಕಳೆದ 02 ವರ್ಷದ ಐ.ಟಿ ರಿಟರ್ನ್ ಪೈಲಿಂಗ್ ಪ್ರತಿ/ಸೇವಾ ಅನುಭವ ಪ್ರಮಾಣ ಪತ್ರಗಳ ಕಂಪನಿ ಮಾಲೀಕ/ಪ್ರೋಪ್ರೈಟರ್ ಆಧಾರ/ಪ್ಯಾನ್ ಕಾರ್ಡ್ ಝರಾಕ್ಸ್ ಪ್ರತಿಗಳನ್ನು ಲಗತ್ತಿಸಬೇಕು.

**ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,**
**ಕೆ.ಸಿ.ಸಿ ಬ್ಯಾಂಕ ಲಿ., ಧಾರವಾಡ**

Scanned with OKEN Scanner